ಜನ ಬರದೇ ಕಾರ್ಯಕ್ರಮ ಅಷ್ಟಕ್ಕಷ್ಟೇ ಆಗಿ ಮುಗಿಯಿತು. ಪುಸ್ತಕ ಬಿಡುಗಡೆಗೆ ಜನ ಬಾರದಿರಲು ಮುಖ್ಯ ಕಾರಣ ಅಂದು ಕೊಳಾಯಿಯಲ್ಲಿ ನೀರು ಬಿಡುಗಡೆ ಆಗಿದ್ದು! ಅದು ಬೇಸಿಗೆ ಕಾಲ. ಅಲ್ಲಿ ವಾರಕ್ಕೊಮ್ಮೆ ಯಾವುದಾದರೂ ಒಂದು ದಿನ ನೀರು ಬಿಡುವ ಕ್ರಮವಿತ್ತು. ಆ 'ನೀರಿನದಿನ' ನಮ್ಮ ಕಾರ್ಯಕ್ರಮದ ದಿನವೇ ಬಂದುಬಿಟ್ಟಿದೆ. ಜನ ಪುಸ್ತಕ ಕೈಬಿಟ್ಟು ನೀರು ಹಿಡಿದರು. ನನಗೂ ಕುಡಿಸಿದರು!

ಮೂರು ದಶಕಗಳ ಹಿಂದೆ ನನ್ನ ಮದುವೆಯಲ್ಲಿ ನನ್ನ ಮೊದಲ ಕಥಾಸಂಕಲನವನ್ನು ಬಾಳ ಸಂಗಾತಿಯೇ ಬಿಡುಗಡೆ ಮಾಡುವುದೆಂದು ಯೋಜಿಸಿದ್ದೆ. ಪಾವೆಂ ಆಚಾರ್ಯರನ್ನು ಕಾರ್ಯಕ್ರಮಕ್ಕೆ ಅತಿಥಿಯಾಗಿ ಆಹ್ವಾನಿಸಲು ಹೋದಾಗ ಅವರು ತಮ್ಮ ಎಂದಿನ ಹಾಸ್ಯದ ಧಾಟಿಯಲ್ಲಿ, 'ಒಂದು ಬಂಧನ, ಇನ್ನೊಂದು ಬಿಡುಗಡೆ' ಎಂದು ಉದ್ಗರಿಸಿದ್ದರು. ಆ ಕಾರ್ಯಕ್ರಮಕ್ಕೆ ಪ್ರೇಕ್ಷಕರ ಕೊರತೆ ಆಗುವಂತಿರಲಿಲ್ಲ. ಏಕೆಂದರೆ ಅಂದು 'ಮದುವೆ ಒಂದು ನೆಪ; ಪುಸ್ತಕ ಬಿಡುಗಡೆ ಮಾಡಿ ಸಂಭ್ರಮಿಸೋಣ' ಎಂಬಂತಿತ್ತು ಕಾರ್ಯಕ್ರಮ! ಜನ ಸೇರಿಸುವುದರ ಕಡುಕಷ್ಟವನ್ನು ನಾನು ಆಗಲೇ ಊಹಿಸಿದ್ದರಿಂದ ಮದುವೆ ಹೆಸರಿನಲ್ಲಿ ಜನರನ್ನು ಕೂಡಿಸಿ ಪುಸ್ತಕ ಬಿಡುಗಡೆ ನೆರವೇರಿಸುವ ಪ್ರಯೋಗ ಮಾಡಿರಬಹುದೇ? ಪುಸ್ತಕ ಬಿಡುಗಡೆ ಕಾರ್ಯಕ್ರಮದಿಂದ ಪ್ರಕಾಶಕರಿಗೆಷ್ಟು ಲಾಭವಾಗುತ್ತದೋ, ಲೇಖಕರಿಗೆಷ್ಟು ಪ್ರಚಾರ ಸಿಗುತ್ತದೋ, ವರದಿಗಾರರಿಗೆ ಭಾಷಣಗಳ ಸಾರ ಸಂಗ್ರಹಿಸಲೆಷ್ಟು ತಲೆಶೂಲೆ ಬರುತ್ತದೋ... ಗೊತ್ತಿಲ್ಲ! ಆದರೆ, ಭಾಗವಹಿಸುವ ಆಸಕ್ತರಿಗೆ ಮಾತ್ರ ಹಳೆಯ, ಹೊಸ ಗೆಳೆಯರ ಭೇಟಿಯ ಲಾಭ ಬಹಳ ದೊಡ್ಡದು. ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಫೇಸ್ಬುಕ್ ಪರಿಚಯಗಳು ಜೀವತಳೆದು ಎದುರಾದಾಗುತ್ತವೆ. ಕೆಲವು ಮುಖಗಳು ಗುರ್ತು ಸಿಕ್ಕರೆ, ಇನ್ನು ಕೆಲವು ಎಲ್ಲೋ ನೋಡಿದಂತೆ ಅನುಮಾನ ಮೂಡಿಸುತ್ತವೆ. ಕೆಲವರ ಮುಖ ತೀರಾ ಪರಿಚಿತ ಎನ್ನಿಸಿ, ಹೆಸರು ಮಾತ್ರ ಹೊಳೆಯುವುದೇ ಇಲ್ಲ. ಕೆಲವೊಮ್ಮೆ ಇಬ್ಬರಿಗೂ ಪರಸ್ಪರ ಯಾರೆಂದು ಕೂನು ಸಿಗದಿದ್ದರೂ ಮಾತುಕತೆಗೇನೂ ಕುಂದಾಗುವುದಿಲ್ಲ! ಮಾತಿನ ಮಧ್ಯೆ ವಿಷಯ ಅನುಸರಿಸಿ ಗುರ್ತು ಹತ್ತುವುದೂ ಉಂಟು. ಸಾಮಾಜಿಕ ಮಾಧ್ಯಮದಲ್ಲಿ ಯಾವುದೋ ಸಾರ್ವಜನಿಕ ವಿಷಯಕ್ಕೆ ತಿಕ್ಕಾಟ ಮಾಡಿಕೊಂಡವರು ಎದುರುಬದುರಾದರೂ ಮುಖ ಬಿಗಿದುಕೊಂಡೋ, ಹೌದೋ ಅಲ್ಲೋ ಅನ್ನುವಷ್ಟು ನಕಲಿನಗು ಉದುರಿಸಿಯೋ ಮರೆಯಾಗುವುದನ್ನೂ ಕಾಣಬಹುದು. ಆಗವರು ಮಾತಾಡಿಸಬೇಕೋ ಬೇಡವೋ ಎಂಬ ಸೈದ್ಧಾಂತಿಕ ತಾಕಲಾಟದಲ್ಲಿ ಮುಳುಗಿದರೂ ಅಚ್ಚರಿಯಿಲ್ಲ. ಈ ಬಗ್ಗೆ ಮಾರ್ಕ್ಸ್, ಲೋಹಿಯಾ, ನೆಹರೂ, ಸಾವರ್ಕರ್ ಏನು ಹೇಳಿದ್ದಾರೋ ಗೊತ್ತಿಲ್ಲ! ಅದು 'ಊರ ಉಸಾಬರಿ ಹಚ್ಚಿಕೊಂಡು ಮುಲ್ಲಾ ಸೊರಗಿದ' ಅನ್ನುವ ಗಾದೆ



ನೆನಪಿಸುವ ಸಂದರ್ಭ.

ಒಮ್ಮೆ ಪುಸ್ತಕ ಬಿಡುಗಡೆ ಕಾರ್ಯಕ್ರಮವೊಂದರಲ್ಲಿ ಇಬ್ಬರು ಆತ್ಮೀಯವಾಗಿ ಮಾತನಾಡುತ್ತಾ ಊಟ ಮಾಡುತ್ತಿದ್ದರು. ನಾನೂ ಅವರ ಟೇಬಲ್ ಸೇರಿಕೊಂಡೆ. ತುಸು ಹೊತ್ತಿನ ಮೇಲೆ ಅವರಲ್ಲಿ ಒಬ್ಬರು ಊಟ ಮುಗಿಸಿ ಎದ್ದರು. ನನ್ನೊಂದಿಗೆ ಉಳಿದ ಗೆಳೆಯರು ಟಿಪಿಕಲ್ ಉತ್ತರ ಕರ್ನಾಟಕದ ಧಾಟಿಯಲ್ಲಿ, 'ನೋಡು... ಆಕಿ ಫೇಸ್ಬುಕ್ಕಿನಾಗ ನನ್ನ ಅನ್ ಫ್ರೆಂಡ್ ಮಾಡ್ಯಾಳ...' ಎಂದರು. 'ಫೇಸ್ಬುಕ್ ನಲ್ಲಿ ಅನ್ ಫ್ರೆಂಡ್ ಆದರೇನಂತೆ ನಿಜ ಜೀವನದಲ್ಲಿ ಗುಡ್ ಫ್ರೆಂಡ್ ಅದೀರಿ ಬಿಡ್ರೆಲ್ಲಾ ಮತ್ತಿನ್ನೇನು...' ಅಂದು ನಾನೂ ಎದ್ದೆ!

●